3



# ಹಾಡು

64

**ಸೂಚನೆ :** ಮಕ್ಕಳನ್ನು ವೃತ್ತಾಕರವಾಗಿ ನಿಲ್ಲಿಸಿ, ಈ ಹಂತಕ್ಕೆ ಬಂದ ಮಗುವಿಗೆ ಹೆಚ್ಚು ಗಮನ ಹರಿಸುತ್ತಾ, ಶಿಕ್ಷಕರು ಸರಳ ಅಭಿನಯದ ಮೂಲಕ ಹಾಡನ್ನು ಹೇಳಿಕೊಟ್ಟು ಹೇಳಿಸುವುದು.

ಹೇಳುತ್ತೀನಿ ಕೇಳಿರವ್ವ ಕೋಳಿ ಕಥೆನಾ
ಮುದ್ದಿನಿಂದ ಸಾಕಿದ್ನವ್ವ ನಾಲ್ಕು ಕೋಳಿನಾ ॥ಪ॥

ಹದ್ದು ಬಂದು ಕೊಂದಿತವ್ವ ಒಂದು ಕೋಳಿನಾ
ಒಂದು ತಿಂದು ಉಳಿಸಿತವ್ವ ಮೂರೇ ಕೋಳಿನಾ
ನಾಲ್ಕರಲ್ಲಿ ಒಂದು ಹೋಗಿ ಉಳಿದದ್ದು ಮೂರು ಮಾತ್ರನೆ

ಚಂದದಿಂದ ನೋಡ್ಕೋತಿದ್ದೆ ಮೂರು ಕೋಳಿನಾ
ರೋಗ ಬಂದು ಸತ್ತು ಹೋಯ್ತು ಮತ್ತೊಂದು ಕೋಳೀನು
ಮೂರರಲ್ಲಿ ಒಂದು ಹೋಗಿ ಉಳಿದಿದ್ದು ಎರಡು ಮಾತ್ರನೇ

ಚಂದದಿಂದ ನೋಡ್ಕೊಂಡಿದ್ದೆ ಎರಡು ಕೋಳಿನಾ
ಮಾರಿ ಹಬ್ಬಕ್ಕೆ ಮುರಿದು ತಿಂದೆ ನಾನೊಂದು ಕೋಳಿನಾ
ಎರಡರಲ್ಲಿ ಒಂದು ಹೋಗಿ ಉಳಿದಿದ್ದು ಒಂದು ಮಾತ್ರನೇ

ಚಂದದಿಂದ ನೋಡ್ಕೋತೀನಿ ಆ ಒಂದು ಕೋಳಿನಾ
ಸಾಕ್ತೀನಪ್ಪ ಅದ್ನ ನಾನು ಮುದ್ದಿನಿಂದಲೇ ॥ಪ॥



# ಹೊರಾಂಗಣ
## ವ್ಯವಕಲನ



**ಉದ್ದೇಶ :** ವ್ಯತ್ಯಾಸವು 5ಕ್ಕೆ ಮೀರದಂತೆ ಕಳೆಯುವುದನ್ನು ಕಲಿಸುವುದು.

### ಚಟುವಟಿಕೆ - 1

**ಕಲಿಕಾ ಕ್ರಮ :**

1. ನೆಲದ ಮೇಲೆ ಒಂದು ವೃತ್ತವನ್ನು ಬರೆದು ಅದರೊಳಗೆ 5 ಮಕ್ಕಳನ್ನು ನಿಲ್ಲಿಸುವುದು.
2. ಮಗುವನ್ನು ಕರೆದು ಈ ವೃತ್ತದೊಳಗೆ ಎಷ್ಟು ಮಕ್ಕಳಿದ್ದಾರೆ ಎಣಿಸಿ ಹೇಳು ಎಂದು ಕೇಳುವುದು.
3. ವೃತ್ತದಿಂದ ಮೂರು ಮಕ್ಕಳನ್ನು ಹೊರಹೋಗಲು ಸೂಚನೆ ನೀಡುವುದು.
4. ಈಗ ವೃತ್ತದೊಳಗೆ ಎಷ್ಟು ಮಕ್ಕಳಿದ್ದಾರೆ ಎಣಿಸಿ ಹೇಳು ಎಂದು ಕೇಳುವುದು.
5. ವೃತ್ತದೊಳಗೆ ಎಷ್ಟು ಮಕ್ಕಳಿದ್ದರು ? ಅವರಲ್ಲಿ ಎಷ್ಟು ಮಕ್ಕಳನ್ನು ಹೊರಕ್ಕೆ ಕಳುಹಿಸಿದೆವು. ಈಗ ವೃತ್ತದೊಳಗೆ ಎಷ್ಟು ಮಕ್ಕಳಿದ್ದಾರೆ ಎಂದು ಪ್ರಶ್ನಿಸಿ ಉತ್ತರ ಪಡೆಯುವುದು.




### ಚಟುವಟಿಕೆ - 2

**ಕಲಿಕಾ ಕ್ರಮ :**

1. ನೆಲದ ಮೇಲೆ ಎರಡು ವೃತ್ತ ಹಾಕಿ ಒಂದು ವೃತ್ತದಲ್ಲಿ ಒಂದು ಮಗುವನ್ನು ಮತ್ತೊಂದು ವೃತ್ತದಲ್ಲಿ ಐದು ಮಕ್ಕಳನ್ನು ನಿಲ್ಲಿಸಬೇಕು.



2. ಒಂದು ಮಗುವಿರುವ ವೃತ್ತದಲ್ಲಿ ಐದು ಮಕ್ಕಳಾಗಬೇಕು ಐದು ಮಕ್ಕಳಿರುವ ವೃತ್ತದಲ್ಲಿ ಒಂದು ಮಗುವಿರಬೇಕು. ಹಾಗೆ ಆಗಲು ಏನೇನು ಮಾಡಬೇಕು ಎಂದು ಕೇಳುವುದು.
3. ಐದು ಮಕ್ಕಳು ಇರುವ ವೃತ್ತದಿಂದ ನಾಲ್ಕು ಮಕ್ಕಳನ್ನು ಒಂದು ಮಗು ಇರುವ ವೃತ್ತಕ್ಕೆ ಸೇರಿಸುವ ಚಟುವಟಿಕೆ ಮಾಡಿಸುವುದು.



**ಸೂಚನೆ :** ಎರಡು ವೃತ್ತಗಳಲ್ಲಿ 5ಕ್ಕೆ ಮೀರದಂತೆ ಮಕ್ಕಳನ್ನು ನಿಲ್ಲಿಸಿ ಮೇಲಿನ ಕ್ರಮದಂತೆ ಚಟುವಟಿಕೆಗಳನ್ನು ಸಪುನರಾವರ್ತಿಸುವುದು.

3



# ವ್ಯವಕಲನ

66

**ಉದ್ದೇಶ :** ವ್ಯತ್ಯಾಸವು 5ಕ್ಕೆ ಮೀರದಂತೆ ಕಳೆಯುವುದನ್ನು ಕಲಿಸುವುದು.

**ಸಾಮಗ್ರಿ :** ಕಲ್ಲುಗಳು, ರಬ್ಬರ್ ಅಂಕಿಗಳು '–' ಮತ್ತು '=' ಚಿಹ್ನೆಗಳು.

**ಕಲಿಸುವ ಕ್ರಮ :**

1. ಒಂದು ಗುಂಪಿನಲ್ಲಿ 5 ಕಲ್ಲುಗಳನ್ನಿಟ್ಟು ಅದೇ ಗುಂಪಿನಿಂದ 2 ಕಲ್ಲುಗಳನ್ನು ಹೊರಗೆ ತೆಗೆದರೆ ಎಷ್ಟು ಉಳಿಯುತ್ತವೆ ಎಂದು ಕೇಳಿ ಉತ್ತರ ಪಡೆಯುವುದು.
   1. ಮೊದಲು ನಿನ್ನ ಬಳಿ ಇದ್ದ ಕಲ್ಲುಗಳೆಷ್ಟು ?
   2. ನನಗೆ ಕೊಟ್ಟ ಕಲ್ಲುಗಳೆಷ್ಟು ?
   3. ನಿನ್ನ ಬಳಿ ಉಳಿದ ಕಲ್ಲುಗಳೆಷ್ಟು ?
2. 4ರಲ್ಲಿ 2ನ್ನು ಕಳೆದರೆ ಎಷ್ಟು ಉಳಿಯುತ್ತದೆ ಎಂಬುದನ್ನು ಈ ರೀತಿ ಬರೆಯಲಾಗುತ್ತದೆ ಎಂದು ಈ ಕೆಳಗಿನ ಸಮಸ್ಯೆಯನ್ನು ಮಗುವಿನಿಂದ ಬರೆಸುವುದು. 4 – 2 = ☐
3. '–' ಚಿಹ್ನೆಯನ್ನು ಪರಿಚಯಿಸುವುದು (ಬರೆಯುವ ಕ್ರಮ ಹೆಸರಿಸುವುದು ಮತ್ತು ಕ್ರಿಯೆಯನ್ನು ಪರಿಚಯಿಸುವುದು)
4. '=' ಚಿಹ್ನೆಯನ್ನು ಪರಿಚಯಿಸುವುದು (ಬರೆಯುವ ಕ್ರಮ, ಹೆಸರಿಸುವುದು ಮತ್ತು ಕ್ರಿಯೆಯನ್ನು ಪರಿಚಯಿಸುವುದು)
5. ಸಮಸ್ಯೆಯಲ್ಲಿ ಯಾವ ಅಂಕಿಯಿಂದ ಯಾವ ಅಂಕಿಯನ್ನು ಕಳೆಯಬೇಕು ಎಂದು ಪ್ರಶ್ನಿಸಿ ಮಗುವಿನಿಂದ ಉತ್ತರ ಪಡೆಯುವುದು. ದೊಡ್ಡ ಸಂಖ್ಯೆಯಿಂದ ಚಿಕ್ಕ ಸಂಖ್ಯೆಯನ್ನು ಕಳೆಯಬೇಕೆಂದು ಮನವರಿಕೆ ಮಾಡಿ ಕಂಬ ಸಾಲಿನಲ್ಲಿ ಅಡ್ಡ ಸಾಲಿನಲ್ಲಿ ಬರೆದು ಕ್ರಿಯೆ ಮಾಡಿಸುವುದು.

```
  4          4 – 2 = [2]
– 2
 [2]
```

**ಶಿಕ್ಷಕರ ಗಮನಕ್ಕೆ :** ಈ ರೀತಿಯ ಬೇರೆ ಬೇರೆ ಚಟುವಟಿಕೆಗಳನ್ನು ಮಾಡಿಸುವುದು ಹಾಗೂ ಹೆಚ್ಚು ವಸ್ತುಗಳಿಂದ ಕಡಿಮೆ ವಸ್ತುಗಳನ್ನು ಕಳೆಯಬೇಕು ಎಂಬ ಕಲ್ಪನೆ ಮೂಡಿಸಿದ ನಂತರ ಹಲವು ಲೆಕ್ಕಗಳನ್ನು ನೋಟ್ ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

3



# ಲೆಕ್ಕಗಳು
# (ವ್ಯವಕಲನ 1-5)

70

**ಸೂಚನೆ :**

1. ಶಿಕ್ಷಕರು ಸೂಚಿಸಿದ ವಿದ್ಯಾರ್ಥಿಯು ಈ ಹಂತಕ್ಕೆ ಬಂದಿರುವ ವಿದ್ಯಾರ್ಥಿಗೆ ಕೆಳಕಾಣಿಸಿದ ಒಂದೊಂದೇ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.
2. ಉತ್ತರಗಳು ಸರಿ/ತಪ್ಪು ಇದ್ದಾಗ್ಯೂ ಶಿಕ್ಷಕರಿಗೆ ವರದಿ ಮಾಡುವುದು.

1. ಕೃಷ್ಣನ ಹತ್ತಿರ 5 ಗೋಲಿಗಳಿವೆ ಅವುಗಳಲ್ಲಿ ಅವನು 3 ಗೋಲಿಗಳನ್ನು ಕಳದುಕೊಂಡರೆ ಉಳಿದ ಗೋಲಿಗಳೆಷ್ಟು ?

2. ಸೋಮನ ಮನೆಯಲ್ಲಿ 4 ಕುರಿಗಳಿದ್ದವು ಅವನ ತಂದೆ 2 ಕುರಿಗಳನ್ನು ಮಾರಿದನು. ಈಗ ಸೋಮನ ಮನೆಯಲ್ಲಿರುವ ಕುರಿಗಳೆಷ್ಟು ?

3. ಲಿಲ್ಲಿಯ ಹತ್ತಿರ 5 ಸಂಪಿಗೆ ಹೂವುಗಳಿದ್ದವು ಅವಳು ತನ್ನ ಗೆಳತಿ ರಾಧಾಳಿಗೆ 2 ಸಂಪಿಗೆ ಹೂವು ಕೊಟ್ಟಳು ಈಗ ಲಿಲ್ಲಿಯ ಬಳಿ ಇರುವ ಸಂಪಿಗೆ ಹೂಗಳೆಷ್ಟು ?

4. ಖಾನನ ತಾಯಿ 4 ಚಪಾತಿ ಮಾಡಿದ್ದರು ಖಾನನು 2 ಚಪಾತಿಗಳನ್ನು ತಿಂದನು ಹಾಗಾದರೆ ಉಳಿದ ಚಪಾತಿಗಳೆಷ್ಟು ?

**ಶಿಕ್ಷಕರ ಗಮನಕ್ಕೆ :** ಇದೇ ರೀತಿ ಶಿಕ್ಷಕರು ಹಲವಾರು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.

3



# ಆಟ
# (ವ್ಯವಕಲನ 1-5)

# 71

**ಸೂಚನೆ :** ಹೂವಿನ ಚಿತ್ರದ ಮೇಲೆ ಇರುವ ಉತ್ತರಗಳಿಗೆ ಮಿಂಚು ಪಟ್ಟಿಯಲ್ಲಿನ ಸರಿ ಹೊಂದುವ ಸಮಸ್ಯೆಗಳನ್ನು ಇಡುವಂತೆ ಚಟುವಟಿಕೆ ಮಾಡಿಸುವುದು.




**ಆಟ ಆಡುವ ಕ್ರಮ :**

1. 2 X 3 ಸೆಂ.ಮೀ. ಅಳತೆಯುಳ್ಳ ಮಿಂಚುಪಟ್ಟಿಗಳಲ್ಲಿ ವ್ಯತ್ಯಾಸ 5ಕ್ಕೆ ಮೀರದಂತೆ, ಸಮಸ್ಯೆಗಳನ್ನು ಬರೆದಿಟ್ಟು ಕೊಳ್ಳುವುದು.
   ಉದಾ : 3 – 2    5 + 4
2. ಈ ಹಂತಕ್ಕೆ ಬಂದ ಮಕ್ಕಳಿಗೆ ಆಟದ ಬೋರ್ಡ್ ಜೊತೆಗೆ ಮಿಂಚುಪಟ್ಟಿಗಳನ್ನು ನೀಡುವುದು.
3. ನೀಡಿರುವ ಮಿಂಚುಪಟ್ಟಿಗಳಲ್ಲಿನ ಸಮಸ್ಯೆಗಳಿಗೆ ಸರಿ ಉತ್ತರವನ್ನು ಆಟದ ಬೋರ್ಡಿನಲ್ಲಿ ಗುರ್ತಿಸಿ ಆ ಸಂಖ್ಯೆಯ ಮೇಲೆ ಮಿಂಚುಪಟ್ಟಿ ಇಡಲು ಸೂಚಿಸಿ ಚಟುವಟಿಕೆಯಲ್ಲಿ ತೊಡಗಿಸುವುದು.
4. ವಿದ್ಯಾರ್ಥಿಯು ಚಟುವಟಿಕೆಯನ್ನು ಪೂರ್ಣಗೊಳಿಸಿದ ನಂತರ ಸಮಸ್ಯೆ ಮತ್ತು ಉತ್ತರಕ್ಕೆ ತಾಳೆ ಬರುವುದನ್ನು ಶಿಕ್ಷಕರು ಖಾತ್ರಿಪಡಿಸಿಕೊಳ್ಳುವುದು.
5. ಉತ್ತರ ಸರಿ ಇದ್ದರೆ ಮೆಚ್ಚುಗೆ ಸೂಚಿಸುವುದು ತಪ್ಪಾಗಿದ್ದಲ್ಲಿ ಕಾರಣ ತಿಳಿದು ಸುಧಾರಣೆಗಾಗಿ ಪರಿಹಾರ ಕ್ರಮ ಕೈಗೊಳ್ಳುವುದು.

3



# ಮೌಲ್ಯಮಾಪನ
## ವ್ಯವಕಲನ

**72**

**ಸೂಚನೆ** : ಕಾರ್ಡ್‌ನಲ್ಲಿರುವ ಸಮಸ್ಯೆಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ವ್ಯವಕಲನ ಮಾಡು.

| | | |
|---|---|---|
| 5<br>- 1<br>____ | 5<br>- 2<br>____ | 4 - 3 = ☐<br>5 - 2 = ☐ |
| 3<br>- 1<br>____ | 4<br>- 2<br>____ | 3 - 2 = ☐<br>4 - 1 = ☐ |
| 4<br>- 3<br>____ | 3<br>- 2<br>____ | 3 - 1 = ☐<br>2 - 1 = ☐ |
| 5<br>- 4<br>____ | 5<br>- 3<br>____ | 4 - 2 = ☐<br>5 - 3 = ☐ |
| 4<br>- 1<br>____ | 2<br>- 1<br>____ | 5 - 4 = ☐<br>5 - 1 = ☐ |



4

# ಹಾಡು
## (1-9 ಅಂಕಿಗಳ ಕಲ್ಪನೆ)

73

**ಸೂಚನೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ. ಈ ಹಂತಕ್ಕೆ ಬಂದ ಮಗುವಿಗೆ ಹೆಚ್ಚು ಗಮನ ಹರಿಸುತ್ತಾ ಶಿಕ್ಷಕರು ಸರಳ ಅಭಿನಯದ ಮೂಲಕ ಹಾಡನ್ನು ಹೇಳಿಕೊಟ್ಟು ಹೇಳಿಸುವುದು.

ಒಂದು ಎರಡು ಬಾಳೆಲೆ ಹರಡು

ಮೂರು ನಾಲ್ಕು ಅನ್ನ ಹಾಕು

ಐದು ಆರು ಬೇಳೆ ಸಾರು

ಏಳು ಎಂಟು ಪಲ್ಯಕೆದಂಟು

ಒಂಭತ್ತು ಹತ್ತು ಎಲೆ ಮುದುರೆತ್ತು

ಒಂದರಿಂದ ಹತ್ತು ಹೀಗಿತ್ತು

ಊಟದ ಆಟವು ಮುಗಿದಿತ್ತು.

4



# ಹೊರಾಂಗಣ
## (ಅಂಕಿಗಳ ಕಲ್ಪನೆ)

# 74

**ಉದ್ದೇಶ :** 6 ರಿಂದ 9ರ ವರೆಗೆ ಅಂಕಿಗಳ ಕಲ್ಪನೆ ಮೂಡಿಸುವುದು.

**ಕಲಿಸುವ ಕ್ರಮ :**

1. ಒಂದು ಗುಂಪಿನಲ್ಲಿ 3 ಮಕ್ಕಳನ್ನು ನಿಲ್ಲಿಸಿ ಆ ಗುಂಪಿಗೆ ಮತ್ತೊಂದು ಮಗುವನ್ನು ಸೇರಿಸಿ 4 ಎಂದೂ, 4ಕ್ಕೆ ಇನ್ನೊಂದು ಮಗು ಸೇರಿಸಿ 5 ಎಂದೂ, 5ಕ್ಕೆ ಮತ್ತೊಂದು ಮಗು ಸೇರಿಸಿ 6 ಎಂದು ಹೇಳಿಸುವುದು.

2. ಇದೇ ರೀತಿ 6 ಮಕ್ಕಳ ಗುಂಪಿಗೆ ಒಂದೊಂದೇ ಮಗು ಸೇರಿಸಿ 7, 8, 9 ರವರೆಗೆ ಹೇಳಿಕೊಡುವುದು.

3. ಶಿಕ್ಷಕರು ಒಂದು ಅಂಕಿಯನ್ನು ಹೇಳಿ ಅಷ್ಟೇ ಮಕ್ಕಳು ಒಂದು ಗುಂಪಿನಲ್ಲಿ ನಿಲ್ಲಲು ಸೂಚನೆ ನೀಡಿ ಚಟುವಟಿಕೆ ಮಾಡಿಸುವುದು.

4. ಒಂದು ಗುಂಪಿನಲ್ಲಿ 6 ಮಕ್ಕಳನ್ನು ನಿಲ್ಲಿಸಿ ಒಂದು ಮಗುವಿಗೆ ಎಣಿಸಿ ಹೇಳಲು ಸೂಚನೆ ನೀಡಿ ಉತ್ತರ ಪಡೆಯುವುದು.

ಸೂಚನೆ : ಇದೇ ರೀತಿ ವಿವಿಧ ವಸ್ತುಗಳನ್ನು ಉಪಯೋಗಿಸಿ ಬೇರೆ ಬೇರೆ ಅಂಕಿಗಳಿಗೆ ಚಟುವಟಿಕೆಗಳಿಂದ 6, 7, 8, 9ರ ಕಲ್ಪನೆ ಮೂಡಿಸುವುದು.

4



# ಅಂಕಿಗಳ ಕಲ್ಪನೆ

75

**ಉದ್ದೇಶ :** 6 ರಿಂದ 9ರ ವರೆಗೆ ಅಂಕಿಗಳ ಕಲ್ಪನೆ ಮೂಡಿಸುವುದು.

**ಸಾಮಗ್ರಿ :** ಕಲ್ಲುಗಳು, ಹುಣಸೆ ಬೀಜಗಳು, ಮಣಿಗಳು 6, 7, 8, 9ರ ಮಿಂಚುಪಟ್ಟಿಗಳು.

**ಕಲಿಸುವ ಕ್ರಮ :**

1. ಒಂದು ವೃತ್ತ ಬರೆದು ಅದರಲ್ಲಿ 4 ಕಲ್ಲುಗಳನ್ನಿಟ್ಟು ಒಂದೊಂದು ಕಲ್ಲನ್ನು ಸೇರಿಸುತ್ತಾ 5,6,7,8, ಎಂದು ಹೇಳಿಕೊಟ್ಟು ಹೇಳಿಸುವುದು ಮತ್ತು ಮಕ್ಕಳಿಂದ ಇದೇ ಚಟುವಟಿಕೆ ಮಾಡಿಸುವುದು.

2. 6 ರಿಂದ 9ರವರೆಗೆ ಚಿತ್ರಗಳಿರುವ ಮಿಂಚುಪಟ್ಟಿಯನ್ನು ತೋರಿಸಿ ಎಷ್ಟು ಚಿತ್ರಗಳಿವೆ ಎಂದು ಪ್ರಶ್ನಿಸಿ ಉತ್ತರ ಪಡೆಯುವುದು ಮತ್ತು 6 ರಿಂದ 9ರವರೆಗೆ ಅಂಕಿ ಹೇಳಿದಾಗ ಅಷ್ಟೇ ಚಿತ್ರಗಳಿರುವ ಮಿಂಚು ಪಟ್ಟಿ ತೆಗೆದು ತೋರಿಸುವಂತೆ ಚಟುವಟಿಕೆ ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :** ಮೇಲೆ ನೀಡಿರುವ ಕಲಿಸುವ ಕ್ರಮದಂತೆ ವಿದ್ಯಾರ್ಥಿಗೆ ಅನೇಕ ಚಟುವಟಿಕೆ ಮಾಡಿಸಿ 6 ರಿಂದ 9ರ ಅಂಕಿಗಳ ಪರಿಕಲ್ಪನೆ ಮೂಡಿಸುವುದು.



# ರಬ್ಬರ್ ಅಂಕಿ ಮತ್ತು ಅಂಕಿಗಳ ಬರವಣಿಗೆ



## ರಬ್ಬರ್ ಅಂಕಿ

**ಸೂಚನೆ:** ಶಿಕ್ಷಕರು ರಬ್ಬರ್ ಅಂಕಿಗಳನ್ನು ನೀಡಿ ಅದರ ಒರಟಾದ ಭಾಗದಲ್ಲಿ ತೋರು ಬೆರಳಿನಿಂದ ಬರೆಯುವ ಕ್ರಮವನ್ನು ಅಭ್ಯಾಸ ಮಾಡಿಸುವುದು ಹಾಗೂ ಆ ಅಂಕಿಯನ್ನು ಹೇಳಿಸುವುದು.

## ಅಂಕಿ ಬರವಣಿಗೆ

**ಸೂಚನೆ:** ಅಂಕಿಗಳನ್ನು ಬರೆದಿರುವ ಕಾರ್ಡ್‌ಗಳ ಮೇಲೆ ಬಾಣದ ಗುರುತಿಗೆ ಅನುಸಾರವಾಗಿ ಬೀಜ ಅಥವಾ ಮಣಿಗಳನ್ನು ಜೋಡಿಸುವಂತೆ ತಿಳಿಸುವುದು.




**ಶಿಕ್ಷಕರ ಗಮನಕ್ಕೆ :** ಈ ಮೇಲಿನ ಅಂಕಿಯನ್ನು ಬಾಣದ ಗುರುತಿನಿಂದ ಬರೆಯುವ ಕ್ರಮವನ್ನು ಮನವರಿಕೆ ಮಾಡಿಸುವುದು ಹಾಗೂ ಮಗು ಹೇಳುತ್ತಾ ಬರೆಯಲು ತಿಳಿಸುವುದು. ತೋರಿಸಿದ ಅಂಕಿಯನ್ನು ಹೆಸರಿಸಲು, ಹೆಸರಿಸಿದ ಅಂಕಿಯನ್ನು ಬರೆಯಲು ಅವಕಾಶ ಮಾಡಿಕೊಟ್ಟು ಈ ಅಂಕಿಯನ್ನು ಸಂಪೂರ್ಣ ಮನವರಿಕೆ ಮಾಡಿಸಿ ನಂತರ ಅಭ್ಯಾಸದಲ್ಲಿ ತೊಡಗಿಸುವುದು.